ಸಹಾಯಹಸ್ತ ಚಾಚುತ್ತಿದ್ದಳು. ಆದರೆ ಸಂಪೂರ್ಣವಾಗಿ ಇತರರ ಕೆಲಸ ಮಾಡುತ್ತಲೇ ಹೋದರೆ ತನ್ನ ಕರ್ತವ್ಯವನ್ನೇ ಮರೆಯಬೇಕಾದೀತು ಎಂಬ ಎಚ್ಚರಿಕೆಯಿಂದಲೂ ಇರಬೇಕಾಗಿತ್ತು.

ಹನ್ನಾ ತನ್ನ ವಾಹನದ ಹಿಂಬದಿ ಆಸನದಲ್ಲಿ ಕುಳಿತ ಸಹಾಯಕ ರೊಬೋ ಕಾಪ್‌ಗಳೊಂದಿಗೆ ಹೊರಡುವಾಗ ಸಂಚಾರ ನಿಯಂತ್ರಣ ಕೇಂದ್ರಕ್ಕೆ ತನ್ನ ಲೊಕೇಷನ್ ಟ್ಯಾಗ್ ಮಾಡಿ ಮಾಹಿತಿ ರವಾನಿಸುವುದನ್ನು ಮರೆಯಲಿಲ್ಲ. ಆದರೆ ಅವರಿಂದ ಬಂದ ಮಾಹಿತಿ ಅವಳ ತಾಳ್ಮೆ ಪರೀಕ್ಷೆ ಮಾಡುವಂತಿತ್ತು.

'ಮ್ಯಾಮ್. ವಾಯುಮಾರ್ಗದಲ್ಲಿ ಪಿತ್ತಜನಕಾಂಗದ ಸುಗಮ ರವಾನೆಗೆ ಅವಕಾಶ ಮಾಡಿಕೊಟ್ಟ ಬೆನ್ನಲ್ಲೇ ರೊಬೋ ವರ್ಕ್‌ಶಾಪ್‌ನಿಂದ ಬೇಡಿಕೆಯೊಂದು ಬಂದಿದೆ. ನಾವು ದುರಸ್ತಿಗೆಂದು ವರ್ಕ್‌ಶಾಪ್‌ಗೆ ನೀಡಲಾದ ರೊಬೋಗಳ ಸ್ಪೇರ್‌ಪಾರ್ಟ್ಸ್‌ಗಳು ಇತರೆಡೆಯಿಂದ ವರ್ಕ್‌ಶಾಪ್‌ಗೆ ಬರಬೇಕಾಗಿದ್ದು ಅದನ್ನು ಹೊತ್ತುಕೊಂಡು ಬರುತ್ತಿದ್ದ ವಾಹನ ದಾರಿಯಲ್ಲೇ ಸಂಚಾರ ದಟ್ಟಣೆಯಲ್ಲಿ ಸಿಕ್ಕಿಹಾಕಿಕೊಂಡಿದೆ. ವರ್ಕ್‌ಶಾಪ್‌ನ ಸಂಯೋಜನಾಧಿಕಾರಿ ಶೈನಿ ಈ ಮಾಹಿತಿಯನ್ನು ಈಗಷ್ಟೇ ನಿಯಂತ್ರಣ ಕೇಂದ್ರಕ್ಕೆ ನೀಡಿದ್ದಾರೆ. ಈಗ ಆ ಸ್ಪೇರ್ ಪಾರ್ಟ್ಸ್‌ಗಳು ಅವರಿಗೆ ತುರ್ತಾಗಿ ತಲುಪಿಸಲು ಮತ್ತೆ ವಾಯುಮಾರ್ಗದಲ್ಲಿ ಸಂಚಾರ ನಿಯಂತ್ರಣ ಮಾಡಬೇಕಾಗಿ ಬಂದಿದೆ.'

'ಅಂತಹ ತುರ್ತು ಅವಶ್ಯಕತೆ ಏನಿದೆ. ಅವರು ಕಾಯಬಹುದಲ್ಲವೇ?'

'ನಾವು ಅವರಿಗೆ ಹೇಳಿದೆವು ಮ್ಯಾಮ್. ಏನಾದರೂ ಜೀವಕ್ಕೆ ಕಂಟಕ ಎದುರಾದ ಪರಿಸ್ಥಿತಿಗಳಲ್ಲಿ, ಗಣ್ಯ ವ್ಯಕ್ತಿಗಳ ಸಂಚಾರ ಸಮಯದಲ್ಲಿ ಇಲ್ಲವೇ ಪ್ರಮುಖ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಸಂದರ್ಭಗಳಲ್ಲಿಯಷ್ಟೇ ಈ ವ್ಯವಸ್ಥೆ ಮಾಡಲಾಗುತ್ತದೆ ಎಂದು. ಆದರೆ ಅವರು ಸಂಚಾರ ಪೊಲೀಸರಿಗೆ ಅನುಕೂಲ ಮಾಡಿಕೊಡುವಾಗ ಇಷ್ಟೂ ನೀವು ಮಾಡದಿದ್ದರೆ ಹೇಗೆ ಎನ್ನುತ್ತಿದ್ದಾರೆ.'

'ನೀವೇನು ಹೇಳಿದ್ರಿ?'

'ಕಮಿಷನರ್ ಸರ್‌ನ ಕೇಳಿ ಹೇಳ್ತೀವಿ. ವ್ಯಾಪ್ತಿಯ ವಾರ್ಡನ್ ನಿಮ್ಹತ್ರ ಮಾತನಾಡ್ತಾರೆ. ನೇರವಾಗಿ ನಿಯಂತ್ರಣ ಕೇಂದ್ರಕ್ಕೆ ನೀವು ಬೇಡಿಕೆ ಸಲ್ಲಿಸುವಂತಿಲ್ಲ ಎಂದಿದ್ದೇವೆ' ಎಂದು ನಿಷ್ಠಾವಂತ ಸಿಬ್ಬಂದಿಯಂತೆ ವರದಿ ಒಪ್ಪಿಸಿದಾಗ ಹನ್ನಾ 'ಭೇಷ್' ಎಂದವಳೇ ಕಮಿಷನರ್‌ರವರೊಂದಿಗೆ ಸಂಪರ್ಕ ಸಾಧಿಸಿದಳು.

ಎಂ.ಪಿ. ವಾಕಿಯಲ್ಲಿ ಅವರಿದ್ದಲ್ಲಿಗೇ ಟೆಲಿಪೋರ್ಟ್ ಆಗಿ ಅಂದಿನ ಘಟನಾವಳಿಗಳನ್ನು ವಿವರಿಸಿದಾಗ ಅವರು, 'ಕಂಟ್ರೋಲ್ ರೂಮ್‌ನಿಂದ ಆಗಲೇ ವಾಯುಮಾರ್ಗದಲ್ಲಿ ಪಿತ್ತಜನಕಾಂಗವನ್ನು ರವಾನಿಸಿದ ವಿವರ ಸಿಕ್ಕಿತು. ಆದರೆ ರೊಬೋ ವರ್ಕ್‌ಶಾಪ್‌ನವರಿಗೂ ಅದೇ ರೀತಿ ಅನುಕೂಲತೆ ಕಲ್ಪಿಸಬೇಕೆಂಬ ಅವರ ಬೇಡಿಕೆ ಸಮಂಜಸವಾದುದಲ್ಲ. ನಾಳೆ ಇನ್ಯಾರಾದರೂ ಅದೇ ರೀತಿ ಬೇಡಿಕೆ ಸಲ್ಲಿಸಿ ಆ ಪಟ್ಟಿ ಉದ್ದ ಬೆಳೆಯುತ್ತಾ ಹೋಗಬಹುದು.'

'ನನಗೂ ಹಾಗೇ ಅನ್ನಿಸಿದೆ ಸರ್. ನೀವು ಹೋದ ಸಲ ವರ್ಕ್‌ಶಾಪ್ ವೀಕ್ಷಣೆಗೆ ಹೋದಾಗ 'ಆದಷ್ಟು ಬೇಗ ದುರಸ್ತಿ ಮಾಡಿ' ಎಂದು ಹೇಳಿದ ಮಾತನ್ನೇ ಹಿಡಿದು ಅವರು ಈ ರೀತಿ ಬೇಡಿಕೆ ಸಲ್ಲಿಸಿರುವರೇನೋ.'

'ಆದರೂ ಅವರಿಗೆ ಈಗ ಸ್ಪೇರ್‌ಪಾರ್ಟ್‌ನ್ನು ತುರ್ತಾಗಿ ರವಾನಿಸಿಲ್ಲವೆಂದು ರೊಬೋ ದುರಸ್ತಿಯನ್ನೇ ಮತ್ತಷ್ಟು ತಡ ಮಾಡುತ್ತಾರೇನೋ. ನೀನು ಕೊಂಚ ಈ ಬಗ್ಗೆ ಫಾಲೋ ಅಪ್ ಮಾಡು' ಎಂದರು.

ಹನ್ನಾ 'ಆಗಲಿ ಸರ್' ಎಂದು ನಿರ್ಗಮಿಸುವಷ್ಟರಲ್ಲಿ, ನಿಯಂತ್ರಣ ಕೇಂದ್ರದಿಂದ ವಿಡಿಯೊ ಕಾನ್‌ಕಾಲ್ ಒಂದು ಅವರಿಬ್ಬರನ್ನು ಸಂಪರ್ಕಿಸಿತ್ತು.

'ಏನು ಹೇಳಿ' ಕಮಿಷನರ್ ಸವ್ಯಸಾಚಿ ಕೇಳಿದಾಗ ಮತ್ತೊಂದು ಕಡೆಯಿಂದ ನಿಯಂತ್ರಣ ಕೇಂದ್ರದ ವ್ಯಕ್ತಿ ಪ್ರತಿಕ್ರಿಯಿಸಿದ್ದ. 'ಸರ್, ಆಸ್ಪತ್ರೆಯೊಂದರಿಂದ ಕರೆಬಂದಿದೆ. ವ್ಯಕ್ತಿಯೊಬ್ಬರಿಗೆ ಅಪಘಾತವಾಗಿದ್ದು ಅವರಿಗೆ ಕೃತಕ ರೊಬೋ ಹಾಗೂ ಕೈಗಳನ್ನು ಅಳವಡಿಸಬೇಕಿದೆ. ಅದನ್ನು ರವಾನೆ ಮಾಡುತ್ತಿದ್ದ ವಾಹನ ಸಂಚಾರ ದಟ್ಟಣೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದು ಅದನ್ನೂ ಏರ್‌ಲಿಫ್ಟ್ ಮಾಡಿ ವಾಯುಸಂಚಾರ ನಿಯಂತ್ರಿಸಲು ಕೇಳಿಕೊಂಡಿದ್ದಾರೆ' ಎಂದಾಗ ಸವ್ಯಸಾಚಿ ಇಕ್ಕಟ್ಟಿನಲ್ಲಿ ಸಿಲುಕಿಕೊಂಡರೆಂದೆನಿಸಿತ್ತು.

ತಾವು ಜೀವನ್ಮರಣದ ನಡುವೆ ಹೋರಾಟ ನಡೆಸುತ್ತಿದ್ದ ವ್ಯಕ್ತಿಯೊಬ್ಬರಿಗೆ ಅಂಗಾಂಗವೊಂದನ್ನು ಸಾಗಿಸಲು ಅನುವು ಮಾಡಿಕೊಟ್ಟ ಬೆನ್ನಲ್ಲೇ ಮತ್ತೋರ್ವರು ಜೀವನ್ಮರಣದ ನಡುವೆ ಹೋರಾಡುತ್ತಿದ್ದು, ಅವರ ದೇಹಕ್ಕೆ ಹೊಂದಾಣಿಕೆಯಾಗಿ ಅವರ ನರಕೋಶಗಳೊಂದಿಗೆ ಸ್ಪಂದಿಸುವಂತಹ ಕೃತಕ ಕೈಕಾಲುಗಳನ್ನು ಬೇರೆಡೆಯಿರುವ ತಯಾರಕರಿಂದ ಆಸ್ಪತ್ರೆಗೆ ರವಾನಿಸಲು ಸಂಚಾರ ನಿಯಂತ್ರಣಕ್ಕೆ ಕೋರಿಕೊಂಡಿದ್ದಾರೆ!

'ಅವರು ಸಂಚಾರ ಸುಗಮಗೊಳ್ಳುವವರೆಗೆ ಕೆಲಕಾಲ ಕಾದರಾಗದೆ?'

'ಅದರ ಬಗ್ಗೆ ವ್ಯಾಪ್ತಿಯ ಟ್ರಾಫಿಕ್ ವಾರ್ಡನ್ ಇಲ್ಲವೇ ತಾವು ಅವರನ್ನು ಕೇಳಬೇಕಾಗುತ್ತದೆ ಸರ್' ಎಂದು ನಿಯಂತ್ರಣ ಕೇಂದ್ರದ ಸಿಬ್ಬಂದಿ ಅರುಹಿದ್ದ. ತಾನು ಕೇವಲ ಮಾಹಿತಿ ರವಾನಿಸುತ್ತಿದ್ದೇನೆಂದು ಈ ಮೂಲಕ ತಿಳಿಸಿದಂತಿತ್ತು.

'ಆಯ್ತು' ಎಂದು ಸವ್ಯಸಾಚಿ ಅವರ ಸಂಪರ್ಕ ಕಡಿದು ಹನ್ನಾಳೊಂದಿಗೆ ಕರೆ ಮುಂದುವರೆಸಿದ್ದರು.

'ಒಂದರ ಹಿಂದೆ ಒಂದು ಬೇಡಿಕೆಗಳು ಬರುತ್ತಿರುವುದನ್ನು ನೋಡಿದರೆ ತುರ್ತು ರವಾನೆಗೆ ನಾವೊಂದು ಸುರಂಗ ವಾಯುಮಾರ್ಗ ಕಲ್ಪಿಸಬೇಕಾಗಿ ಬಂದಿದೆ. ಈಗ ಸದ್ಯ ನೀನು ಸಂಬಂಧಪಟ್ಟವರೊಂದಿಗೆ ಮಾತನಾಡಿ ತಕ್ಷಣಕ್ಕೆ ಅವರಿಗೆ ನಮ್ಮ ಮಿತಿಗಳ ಬಗ್ಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸು. ಅಂತಹ ಅನಿವಾರ್ಯ ಪರಿಸ್ಥಿತಿ ಇದ್ದರೆ ಸೂಕ್ತ ಮಾರ್ಗವನ್ನು ಕಲ್ಪಿಸಿದರಾಯಿತು. ಅನಂತರ ಇದಕ್ಕೊಂದು ಪರಿಹಾರ ಹುಡುಕುವ' ಎಂದು ಕರೆ ಕತ್ತರಿಸಿದಾಗ, ಹನ್ನಾ ತನಗೆ ನೀಡಿದ ಹೊಸ ಕರ್ತವ್ಯದ ತುಲನೆ ಮಾಡುತ್ತಾ ತನ್ನ ಎಂ.ಪಿ. ವಾಕಿಯ ಸಹಾಯಕಿ ಶಮ್ಮಿಯನ್ನು ಆಹ್ವಾನಿಸಿದಳು.

'ತುರ್ತಾಗಿ ಸಂಚಾರ ಸುಗಮಗೊಳಿಸಲು ಕೋರಿರುವ ಆಸ್ಪತ್ರೆ ಹಾಗೂ ವರ್ಕ್‌ಶಾಪ್‌ಗೆ ಸಂಪರ್ಕ ಕಲ್ಪಿಸು' ಎಂದು ಅವಳು ನೀಡಿದ ಆಜ್ಞೆಗೆ ಶಮ್ಮಿ 'ಆಯ್ತು ಮ್ಯಾಮ್' ಎಂದು ನೇಪಥ್ಯಕ್ಕೆ ಸರಿದಿತ್ತು. ಕೆಲಹೊತ್ತಿಗೇ ವರ್ಕ್‌ಶಾಪ್‌ನ ತಾಂತ್ರಿಕ ಹಾಗೂ ಸರಬರಾಜು ವಿಭಾಗದ ಮುಖ್ಯಸ್ಥ ಶೈನಿ ಸಂಪರ್ಕಕ್ಕೆ ಸಿಕ್ಕಿದ್ದ.

'ಶೈನಿಯವರೇ, ನಿಮಗೆ ತುರ್ತಾಗಿ ರೊಬೋಗಳ ಸ್ಪೇರ್‌ಪಾರ್ಟ್ಸ್ ರವಾನೆ ಮಾಡಬೇಕಾಗಿದೆಯೇ?' ಗೊತ್ತಿದ್ದೂ ಮುಗ್ಧಳಂತೆ ಕೇಳಿದ್ದಳು.

'ಮ್ಯಾಮ್, ನಿಮಗೆ ತಿಳಿಯದ ವಿಷಯವಿದೆಯೇ? ನಿಮಗೆ ತುರ್ತಾಗಿ ವ್ಯಕ್ತಿಯ ಅಂಗಾಂಗಗಳನ್ನು ಸಾಗಿಸಲು ಸಾಧ್ಯವಾಗುವುದಾದರೆ ರೊಬೋಗಳ ಸ್ಪೇರ್‌ಪಾರ್ಟ್ಸ್ ರವಾನೆಯನ್ನೂ ಸುಗಮವಾಗಿ ಸಾಗಿಸಲು ಅವಕಾಶ ಕಲ್ಪಿಸುವುದು ಕಷ್ಟವೇನಲ್ಲ'.

'ಆದರೆ ಜೀವಕ್ಕೆ ಹಾನಿಯಾಗುವಂತಹ ತುರ್ತು ಪರಿಸ್ಥಿತಿಯಲ್ಲವೆಂದು ನನ್ನ ಅನಿಸಿಕೆ' ಶಾಂತಳಾಗಿ ಉತ್ತರಿಸಿದಳು.

ಅತ್ತ ಶೈನಿ ತನ್ನ ಹಟವನ್ನು ಬಿಡಲೊಲ್ಲನಾಗಿದ್ದ.

'ನಿಮಗೆ ಎಲ್ಲಾ ಕೆಲಸ ಅತಿ ಬೇಗನೆ ಮಾಡಬೇಕೆಂಬ ಬಯಕೆಯಿದ್ದಾಗ, ಅದಕ್ಕೆ ಪೂರಕವಾಗಿ ವ್ಯವಸ್ಥೆ ಕಲ್ಪಿಸುವುದೂ ನಿಮ್ಮ ಆದ್ಯ ಕರ್ತವ್ಯವಲ್ಲವೇ?'

'ನನ್ನ ಕರ್ತವ್ಯದ ಬಗ್ಗೆ ಯಾಕೆ ಹೇಳುತ್ತಿರುವಿರಿ ಶೈನಿಯವರೇ? ಈ ಸಂಚಾರ ದಟ್ಟಣೆ ತೆರವುಗೊಳಿಸಿ ಸುಗಮಗೊಳಿಸಲು ಆದಷ್ಟು ಪ್ರಯತ್ನಗಳಾಗ್ತಾ ಇವೆ. ಕೊಂಚ ಹೊತ್ತು ಕಾದರಾಗದೆ?'

'ಮ್ಯಾಮ್, ನೀವು ಹೀಗೇ ಕಾಲ ತಳ್ತಾ ಹೋದರೆ ಇದಕ್ಕೆ ಪರಿಹಾರ ಸಿಗೋದು ಯಾವಾಗ? ಇದಕ್ಕೆಲ್ಲಾ ಒಂದು ಶಾಶ್ವತ ವ್ಯವಸ್ಥೆಯಾದರೂ ಮಾಡಿ.'

'ಈ ಮಾತು ನಾನು ಒಪ್ಪಬಲ್ಲೆ. ದಿಢೀರ್ ಎಂದು ಎಲ್ಲವನ್ನೂ ಮಾಡಲಿಕ್ಕಾಗದು. ನಿಮ್ಮ ಕೋರಿಕೆಯನ್ನು ನಮ್ಮ ಸಂಚಾರ ಕಮಿಷನರ್‌ರವರಿಗೆ ತಿಳಿಸುತ್ತೇನೆ. ಆದರೆ ಅದಕ್ಕೆ ಕಾಯಂ ಪರಿಹಾರ ಕಲ್ಪಿಸುವವರೆಗೂ ನೀವು ಕೊಂಚ ತಾಳ್ಮೆಯಿಂದಿರಬೇಕಷ್ಟೇ.'

ಅಲ್ಲಿಗೆ ಶೈನಿಯವರ ಕಡೆಯ ಬೇಡಿಕೆ ನಿಭಾಯಿಸಿದ್ದಾಗಿತ್ತು. ಇನ್ನು ಆಸ್ಪತ್ರೆಯೊಂದಕ್ಕೆ ಗಾಯಾಳುವಿನ ಕೃತಕ ಅಂಗಾಂಗಗಳನ್ನು ರವಾನೆ ಮಾಡುವ ವಿಚಾರ ಎದುರಿಗಿತ್ತು.

ಅವಳು ಆ ಆಸ್ಪತ್ರೆಯ ಪಿ.ಆರ್.ಒ.ನನ್ನು ಕೇಳಿದ ಮೊದಲ ಪ್ರಶ್ನೆ, 'ರೋಗಿ ಕ್ರಿಟಿಕಲ್ ಸ್ಥಿತಿಯಲ್ಲಿರುವನೇ? ಸಾಮಾನ್ಯವಾಗಿ ಈ ರಸ್ತೆ ಸಂಚಾರ ದಟ್ಟಣೆ ಇನ್ನೇನು ಸುಮಾರು ಒಂದು ಗಂಟೆಯಲ್ಲಿ ತೆರವಾಗಬಹುದು. ಅಲ್ಲಿಯವರೆಗೂ ನೀವು ಕಾದರಾಗದೆ?'

**ಸಶೇಷ**